37	ವಾರ್ಡ್ ನಂ–15–ಆಶ್ರಯ ಕಾಲನಿಯಲ್ಲಿ ಸಮುದಾಯ ಭವನ ನಿರ್ಮಿಸುವುದು.	02.00
	ಒಟ್ಟು	**2.00**
	"V" ಶೇಪ್ ಗಟಾರು	
38	ವಾರ್ಡ್ ನಂ–3– ಪ್ರಕಾಶ ನಗರ "V" ಶೇಪ್ ಹಟಾರ ಹಾಕುವುದು.	02.00
39	ವಾರ್ಡ್ ನಂ–10 ಕಮಲಾಬಾಯಿ ಪಾಟೀಲ ಮನೆಯಿಂದ ಮಡಿವಾಳ ಗಲ್ಲಿಯವರೆಗೆ "V" ಗಟಾರು ಹಾಕುವುದು ಹಾಗೂ ವಾಗೆ ಮನೆಯಿಂದ ಗಳತಗೆ ಮನೆಯವರೆಗೆ "V" ಗಟಾರ ಹಾಕುವುದು.	01.00
40	ವಾರ್ಡ್ ನಂ–7– "V" ಗಟಾರ ಹಾಕುವುದು	01.00
41	ವಾರ್ಡ್–18– "V" ಗಟಾರ ಹಾಕುವುದು	01.00
	ಒಟ್ಟು	**05.00**
	ವಿದ್ಯುತ್ ಕಾಮಗಾರಿಗಳು	
42	ವಾರ್ಡ್ ನಂ–1, 4–ಹೊಸ ಬಸ್ಸ್ ನಿಲ್ದಾಣದಿಂದ ಟೆಲಿಫೋನ್ ಎಕ್ಸೆಂಜ್‌ವರೆಗೆ ರಸ್ತೆಯ ಮಧ್ಯ ಕಂಬ ಅಳವಡಿಸಿ ಸೋಡಿಯಂ ಲ್ಯಾಂಪ್ ಅಳವಡಿಸಿ ಸ್ಟೇಟ್ ಲೈಟ್ ಹಾಕುವುದು.	25.00
	ಒಟ್ಟು	**25.00**
	ಒಟ್ಟು ಮೊತ್ತ	**162.72**

539 ಶ್ರೀ ರೋಷನ್ ಬೇಗ್.ಆರ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶ್ಚಿಮ ಘಟ್ಟ ಅರಣ್ಯ ಸಂರಕ್ಷಣೆ ಕೈಗೊಳ್ಳುವ ಬಗ್ಗೆ ಯಾವುದಾದರೂ ಯೋಜನೆ ಸರ್ಕಾರದ ಗಮನದಲ್ಲಿದೆಯೇ;

ಆ) ಮೇಲ್ಕಂಡ ಯೋಜನೆಗೆ ಭಾರತ ಸರ್ಕಾರವು ರೂ.700 ಕೋಟಿಯಷ್ಟು ಹಣ ಮಂಜೂರು ಮಾಡಿದೆಯೇ;

ಇ) ಪಶ್ಚಿಮ ಘಟ್ಟ ಅರಣ್ಯ ಪ್ರದೇಶ ಅಭಿವೃದ್ಧಿ ಮತ್ತು ಸಂರಕ್ಷಣೆಯ ಬಗ್ಗೆ ಯೋಜನೆ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಯವರು) :

ಅ) ಇಲ್ಲ.

ಆ) ಇಲ್ಲ.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಪ್ರಸ್ತುತ ಹಲವಾರು ಕಾರ್ಯಕ್ರಮಗಳಲ್ಲಿ ಹಾಗೂ ಜಪಾನ್ ದೇಶದ ಆರ್ಥಿಕ ನೆರವಿನ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣಾ ಯೋಜನೆಯಡಿಯಲ್ಲಿ ಪಶ್ಚಿಮ ಘಟ್ಟಗಳ ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣಾ ಕೆಲಸಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪಶ್ಚಿಮ ಘಟ್ಟಗಳ ಅರಣ್ಯ ಅಭಿವೃದ್ಧಿ ಮತ್ತು ಸಂರಕ್ಷಣೆ ಬಗ್ಗೆ ಪ್ರತ್ಯೇಕ ಹೊಸ ಯೋಜನೆಯನ್ನು ಕೈಗೊಳ್ಳುವ ಉದ್ದೇಶದಿಂದ ಸರ್ಕಾರವು ಪಶ್ಚಿಮಘಟ್ಟ ಕಾರ್ಯಪಡೆಯನ್ನು ರಚಿಸಿದ್ದು ಕಾರ್ಯಪಡೆಯು ಈಗಾಗಲೇ ಈ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಅನಷ್ಠಾನಗೊಳಿಸಲಾಗುತ್ತಿದೆ.

539 Sri Roshan Baig. R : Hon'ble Chief Minister kindly answer to the below question?

a) Is there any project before the Government the Government regarding development and conservation of the forest of Western Ghats;

b) Has Government of India sanctioned for Rs.700 crores to the above project;

c) Has the Government Intended to take up the project for development and conservation of the forests of western Ghats?

B.S.YEDDYURAPPA (Chief Minister) :

a) No.

b) No.

c) Work pertaining to development and conservation of forests of Western Ghats are being Implemented under serval schemes of the State Government and the Government of India, and also under the Karnataka Sustainable Forest Management and Biodiversity Conservation Project with the financial assistance of the Government of Japan. For the development and conservation of the forests of Western Ghats, Government has Constituted Western

Ghats Task Force. The Task Force has already initiated implementation of Programmes.

540 ಶ್ರೀ ರೋಷನ್ ಬೇಗ್.ಆರ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ 15 ಸಾವಿರ ಎಕರೆ ಜಮೀನಿನಲ್ಲಿ ಗಿಡ ನೆಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ಈ ಯೋಜನೆಗೆ ಅರಣ್ಯ ಇಲಾಖೆಯಿಂದ ಮಂಜೂರಾದ ಹಣ ಎಷ್ಟು;

ಇ) ಈ ಯೋಜನೆಗೆ ಇಲ್ಲಿಯವರೆಗೆ ಭಾರತ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) 2009–2010ನೇ ಸಾಲಿಗೆ ಕೇಂದ್ರ ಸರ್ಕಾರವು ನಿಗಧಿಪಡಿಸಿದ ಮೇರೆಗೆ 80,000 ಹೆ. ಪ್ರದೇಶದಲ್ಲಿ ಗಿಡ ನೆಡುವ ಯೋಜನೆಯನ್ನು ಹಮ್ಮಿಕೊಂಡಿದೆ.

ಆ) ಈ ಯೋಜನೆಗೆ ಸರ್ಕಾರವು ವಿವಿಧ ಯೋಜನೆಗಳಡಿಯಲ್ಲಿ ಒಟ್ಟು ರೂ. 22,595.70 ಲಕ್ಷ ಹಣವನ್ನು ಮಂಜೂರು ಮಾಡಿದೆ.

ಇ) ಕೇಂದ್ರ ಸರ್ಕಾರದ ರಾಷ್ಟ್ರೀಯ ಅರಣ್ಯೀಕರಣ ಯೋಜನೆಯಲ್ಲಿ ರೂ.151.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ರೂ.300.00 ಕೋಟಿಗಳ ಅನುದಾನವನ್ನು ಅರಣ್ಯ ಇಲಾಖಾ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರು ಮಾಡಲಾಗಿದೆ.

540 Sri Roshan Baig. R : Hon'ble Chief Minister kindly answer to the below question?

a) Is there any Project by the Government for Planting of trees in 15000 acres during 2009-10.

b) What is the amount sanctioned to the Forest Department for the above Project?

c) What is the amount released for this project by the Government of India so far?